

# ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
# ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

## ರಾಷ್ಟ್ರೀಯ ಸಮ್ಮೇಳನ

**ಕನ್ನಡ ಸಾಹಿತ್ಯ : ಮಹಿಳಾ ಅಸ್ತಿತ್ವ ಸಂಕಥನ**

ದಿನಾಂಕ : **28–03–2018**

ಸ್ಥಳ : **ಬಿ.ಎಂ.ಶ್ರೀ. ಸಭಾಂಗಣ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ**




**ಇವರಿಗೆ,**

––––––––––––––––––––––––––––––––

––––––––––––––––––––––––––––––––

––––––––––––––––––––––––––––––––

# ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪರಿಚಯ

ಕರ್ನಾಟಕದ ಹಿರಿಯ ಹಾಗೂ ವಿದ್ವತ್ತಿನ ತಾಣ ಮೈಸೂರು ವಿಶ್ವವಿದ್ಯಾನಿಲಯ, ಇದೀಗತಾನೆ ಶತಮಾನೋತ್ಸವ ಸಂಭ್ರಮ ಮುಗಿಸಿಕೊಂಡು ಮುಂದಿನ ಶತಮಾನಕ್ಕೆ ಕಾಲಿರಿಸಿದೆ. ಈ ಸಮಾಜಕ್ಕೆ ಶ್ರೇಷ್ಠ ಚಿಂತಕರನ್ನು, ಸಾಧಕರನ್ನು, ವಿಜ್ಞಾನಿಗಳನ್ನೂ ಅಲ್ಲದೆ ಜ್ಞಾನಪೀಠಕ್ಕೂ ಅರ್ಹವಾದ ವಿದ್ವತ್ಪೂರ್ಣ ಸಾಹಿತಿಗಳನ್ನು ಸೃಜಿಸಿದ ವಿದ್ಯಾಕ್ಷೇತ್ರ ಮೈಸೂರು ವಿಶ್ವವಿದ್ಯಾನಿಲಯ. ವಿಭಿನ್ನ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನು ಒಳಗೊಂಡಿದ್ದು, ಅದರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯದು ಹಿರಿಯ ಪಾಲು.

ಅಶೋಕ ಮರಗಳೆರಡು **'ನ ಹಿ ಜ್ಞಾನೇನ ಸದೃಶಂ'** ಎನ್ನುತ್ತಾ ಅಕ್ಷರ ಸ್ವಾಗತ ಕೋರುತ್ತಾ ನಿಂತಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಇದೀಗ ಐವತ್ತರ ಸಂಭ್ರಮ. 1927ರ ಜುಲೈನಲ್ಲಿ ಮಹರಾಜ ಕಾಲೇಜಿನಲ್ಲಿ ಕನ್ನಡ ಎಂ.ಎ ಮೂಲಕ ಸೇವೆ ಆರಂಭಿಸಿದ ಕನ್ನಡ ಅಧ್ಯಯನ ಸಂಸ್ಥೆ ಅವಿರತ ಕಾರ್ಯದ ಮೂಲಕ ಕನ್ನಡ ಮತ್ತು ಕರ್ನಾಟಕವನ್ನು ಕಟ್ಟುತ್ತಾ ಬಂದಿದೆ. ಜಾಗತಿಕ ಮಟ್ಟದಲ್ಲಿ ಕನ್ನಡ ತನ್ನ ಅಸ್ಮಿತೆಯನ್ನು ಛಾಪಿಸಲು ಕಾರಣವಾಗಿದೆ.

ಕನ್ನಡ ಎಂ.ಎ ತರಗತಿಯಿಂದ ಆರಂಭಗೊಂಡು ಪ್ರಸ್ತುತ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಹೆಮ್ಮೆಯ ಕುವರಿಯಾಗಿ 'ಮಿನಿ ವಿಶ್ವವಿದ್ಯಾನಿಲಯ' ಎಂದೇ ಪ್ರಖ್ಯಾತವಾಗಿದೆ. ಇಲ್ಲಿ ನೆಡೆಯುವ ಕಾರ್ಯ ಕಲಾಪಗಳು ಅಪಾರ. ಬೋಧನೆ, ಸಂಶೋಧನೆ, ಸಂಪಾದನೆ, ಪ್ರಕಟಣೆ, ಭಾಷಾಂತರ ಹೀಗೆ ನಾಲ್ಕು ಸ್ನಾತಕೋತ್ತರ ಪದವಿಗಳು, ವಿಶ್ವಕೋಶ, ಹಸ್ತಪ್ರತಿ ಸಂಪಾದನೆ, ಶಾಸನ ಅಧ್ಯಯನ, ಅನುವಾದ ವಿಭಾಗಗಳು, ಬಸವ ಅಧ್ಯಯನ ಪೀಠ, ಕುವೆಂಪು ಅಧ್ಯಯನ ಪೀಠ, ಪಿ.ಆರ್ ತಿಪ್ಪೇಸ್ವಾಮಿ ಅಧ್ಯಯನ ಪೀಠ, ಹೀಗೆ ಸಾಧಕರ ಹೆಸರಿನ ಪೀಠಗಳೆಲ್ಲವೂ ಸೇರಿ ಕನ್ನಡವನ್ನು ಮತ್ತು ಸಾಹಿತ್ಯವನ್ನು ಹೊಸ ಬಗೆಯಲ್ಲಿ, ಹೊಸ ಓದುಗಳ ಮೂಲಕ ನಿರ್ಮಿಸುವಲ್ಲಿ ನಿರತವಾಗಿವೆ.

ಸುಸಜ್ಜಿತ ಗ್ರಂಥಾಲಯ, ಗಣಕ ಯಂತ್ರಾಲಯ ಇಲ್ಲಿನ ಜ್ಞಾನದ ತಾಣಗಳು. ಸಂಸ್ಥೆಯು ಅವಿರತವಾದ ಕಾರ್ಯಕ್ರಮಗಳ ಮೂಲಕ ಜ್ಞಾನವನ್ನು ಶೋಧಿಸುವ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತ ಇದೀಗ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲು ಮುಂದಾಗಿದೆ.

ರಾಷ್ಟ್ರೀಯ ಸಮ್ಮೇಳನವು "ಕನ್ನಡ ಸಾಹಿತ್ಯ : ಮಹಿಳಾ ಅಸ್ತಿತ್ವ ಸಂಕಥನ" ಎಂಬ ಕೇಂದ್ರ ವಿಷಯವನ್ನಿಟ್ಟುಕೊಂಡು ಇಡೀ ಮಹಿಳಾ ಅಸ್ಮಿತೆಯ ಸಂಕಥನವನ್ನು ಕಟ್ಟುವ ಆಶಯದಿಂದ ಹೊರಟಿದೆ. ಮೌಖಿಕ ಸಾಹಿತ್ಯದಿಂದ ಆರಂಭಗೊಂಡು ವರ್ತಮಾನದವರೆಗಿನ ಸಾಹಿತ್ಯದ ಅನನ್ಯತೆ ಮಹಿಳಾನೆಲೆಯನ್ನು ಕುರಿತು ಇಲ್ಲಿ ಸಂಶೋಧಿಸುವ, ದಾಖಲಿಸುವ, ವಾಗ್ವಾದಿಸುವ ಹಾಗೂ ಸಮಾನತ ಧಾರೆಗಳನ್ನು ಕಂಡುಕೊಳ್ಳುವುದು ನಮ್ಮ ಉದ್ದೇಶ. ಈ ಹಿನ್ನೆಲೆಯಲ್ಲಿ ಬಹುಶಿಸ್ತೀಯ ನೆಲೆಯಲ್ಲಿ ಚಿಂತನೆಗೆ ಅವಕಾಶ ಇಲ್ಲಿದೆ.

## ರಾಷ್ಟ್ರೀಯ ಸಮ್ಮೇಳನದ ಬಗ್ಗೆ

**ಕನ್ನಡ ಸಾಹಿತ್ಯ : ಮಹಿಳಾ ಅಸ್ತಿತ್ವ ಸಂಕಥನ** ಎಂಬ ವಿಷಯವನ್ನು ಕುರಿತು ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ದಿ : **28–03–2018** ರಂದು **ಬಿ.ಎಂ.ಶ್ರೀ ಸಭಾಂಗಣದಲ್ಲಿ** ಆಯೋಜಿಸಲಾಗುತ್ತಿದೆ. ಈ ಸಮ್ಮೇಳನದಲ್ಲಿ ಕೆಳಗೆ ನಮೂದಿಸಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಆಸಕ್ತರು ಸಮನಾಂತರ ವೇದಿಕೆಯಲ್ಲಿ ಪ್ರಬಂಧ ಮಂಡಿಸಲು ಆಹ್ವಾನಿಸಲಾಗಿದೆ.

ಅಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರಬಂಧ ಮಂಡಿಸುವವರು **A4 ಅಳತೆಯ ನುಡಿ–01, Font 14 ನಲ್ಲಿ ಎಡ ಮತ್ತು ಬಲ ಮಾರ್ಜಿನ್ 1.25, ಮೇಲ್ಭಾಗ ಮತ್ತು ಕೆಳಭಾಗದಲ್ಲಿ 1.0 ಮಾರ್ಜಿನ್ ಬಿಟ್ಟು , 4 ರಿಂದ 8 ಪುಟ ಇರುವಂತೆ ಡಿ.ಟಿ.ಪಿ ಮಾಡಿ Soft copy ಯನ್ನು** mahilasankathana2018@gmail.com **ಕಳುಹಿಸುವುದು. Hard copy** ಯನ್ನು ಕೆಳಗಿನ ವಿಳಾಸಕ್ಕೆ **ಮಾರ್ಚ್ 24, 2018ರ** ಒಳಗೆ ತಲುಪುವಂತೆ ಕಳುಹಿಸುವುದು. ಈ ಸಮ್ಮೇಳನದಲ್ಲಿ ಭಾಗವಹಿಸಲು ಹಾಗೂ ಪ್ರಬಂಧ ಮಂಡನೆ ಮಾಡಲು, ಶುಲ್ಕರಹಿತ ನೋಂದಾವಣಿಗೆ ಅವಕಾಶವಿದೆ. ಭಾಗವಹಿಸಿದವರಿಗೆ ಪ್ರಮಾಣ ಪತ್ರವನ್ನು ಮಾತ್ರ ನೀಡಲಾಗುತ್ತದೆ

**ವಿಷಯಗಳು**

1. ಜಾನಪದ ಸಾಹಿತ್ಯ
2. ಕನ್ನಡ ಶಾಸನಗಳು
3. ಪ್ರಾಚೀನ ಕನ್ನಡ ಕಾವ್ಯಗಳು
4. ಮಧ್ಯಕಾಲೀನ ಸಾಹಿತ್ಯ
5. ನವೋದಯ ಸಾಹಿತ್ಯ
6. ಪ್ರಗತಿಶೀಲ ಸಾಹಿತ್ಯ
7. ನವ್ಯ ಸಾಹಿತ್ಯ
8. ದಲಿತ ಸಾಹಿತ್ಯ
9. ಬಂಡಾಯ ಸಾಹಿತ್ಯ
10. ಸ್ತ್ರೀವಾದಿ ಸಾಹಿತ್ಯ

ಈ ಮೇಲ್ಕಂಡ ವಿಷಯಗಳ ಆಧಾರದಲ್ಲಿ ಮಹಿಳಾ ಅಸ್ತಿತ್ವದ ಸಂಕಥನವನ್ನು ಕಟ್ಟಿಕೊಡುವುದು. ಹೆಚ್ಚಿನ ಮಾಹಿತಿಗಾಗಿ, Kuvempu Institute of Kannada Studies / University of Mysore ವೆಬ್ ಸೈಟನ್ನು ನೋಡುವುದು.

**ಡಾ.ಎನ್.ಕೆ. ಲೋಲಾಕ್ಷಿ** ಎಂ.ಎ(ಕನ್ನಡ),
ಪಿಎಚ್.ಡಿ, ಎಂ.ಎ (ಎಂ.ಸಿ.ಜೆ)
ಪಿ.ಜಿ.ಡಿ.ಎಂ.ಸಿ.ಜೆ, ಡಿ.ಆರ್.ಎಲ್
ಸಹಾಯಕ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–06
Mob : 9480157279

**ಡಾ. ವಿಜಯಕುಮಾರಿ ಎಸ್.ಕರಿಕಲ್**
ಎಂ.ಎ, ಎಂ.ಫಿಲ್, ಪಿಎಚ್.ಡಿ
ಸಹ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–06
Mob : 9448794992

## ಆಯೋಜನಾ ಸಮಿತಿ

1. ಪ್ರೊ. ಪ್ರೀತಿ ಶ್ರೀಮಂದರಕುಮಾರ್
2. ಪ್ರೊ. ಅರವಿಂದ ಮಾಲಗತ್ತಿ
3. ಪ್ರೊ. ಎನ್.ಎಂ. ತಳವಾರ್
4. ಡಾ. ನಂಜಯ್ಯ ಹೊಂಗನೂರು
5. ಡಾ. ರವೀಂದ್ರನಾಥ್.ಬಿ.ಕೆ
6. ಡಾ. ಎಸ್.ಡಿ. ಶಶಿಕಲಾ
7. ಡಾ. ವಿಜಯಕುಮಾರಿ ಎಸ್ ಕರಿಕಲ್
8. ಡಾ. ಎನ್.ಕೆ. ಲೋಲಾಕ್ಷಿ

# ನೋಂದಣಿ ಅರ್ಜಿ

## ರಾಷ್ಟ್ರೀಯ ಸಮ್ಮೇಳನ

## ಕನ್ನಡ ಸಾಹಿತ್ಯ : ಮಹಿಳಾ ಅಸ್ತಿತ್ವ ಸಂಕಥನ

ದಿನಾಂಕ : **28–03–2018**

ಸ್ಥಳ : **ಬಿ.ಎಂ.ಶ್ರೀ.ಸಭಾಂಗಣ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ**

| | | |
|---|---|---|
| 1 | ಹೆಸರು | |
| 2 | ಹುದ್ದೆ | |
| 3 | ವಿಳಾಸ | |
| 4 | ಇ–ಮೇಲ್ ವಿಳಾಸ | |
| 5 | ಮೊಬೈಲ್ ಸಂಖ್ಯೆ | |
| 6 | ಪ್ರಬಂಧದ ಶೀರ್ಷಿಕೆ | |

ಪ್ರಬಂಧಕಾರರ ಸಹಿ